**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.588/2023**

**CW - 2 PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹಸ್ಸನ ಅಲಿ |
| ತಂದೆ | ಃ | ಲಾಡ್ಲೆ ಸಾಬ್ |
| ವಯಸ್ಸು | ಃ | 46 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹಿರೇರಾಯಕುಂಪಿ |
| ಪ್ರಮಾಣಿಕರಿಸಿದ ದಿನಾಂಕ | ಃ | **09-01-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ದಿ. 30-04-2023 ರಂದು ಸಂಜೆ 05:30 ರಿಂದ 06:30 ರ ಅವಧಿಯಲ್ಲಿ ಪೊಲೀಸರು ಚಾಸಾ-1 ರವರು ತೋರಿಸಿದ ಸ.ನಂ.163 ರಲ್ಲಿನ ಗುನ್ಹೇ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ 4 ಕಟ್ಟಿಗೆಗಳನ್ನು ಅಮಾನತು ಪಡಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ನಿಪಿ-2, ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೇ ಇರುವ 4 ಕಟ್ಟಿಗಳನ್ನು ಮು.ಮಾ 1 ರಿಂದ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಆರೋಪಿತರ ಪರ ಶ್ರೀ. ಎ.ಪಿ ವಕೀಲರಿಂದ.**

ನನ್ನ ಸ್ವಂತ ಊರು ಯಾದಗಿರಿ ಜಿಲ್ಲೆಯ ವಡಗೇರಾ ತಾಲೂಕಿನ ಬೆಂಡೆಗಂಬ್ಳಿ ಆಗಿರುತ್ತದೆ. ಸದರಿ ನಮ್ಮ ಊರಲ್ಲಿ ಜಮೀನು ಮನೆ ಇರುತ್ತವೆ. ನಾನು ಹಿರೇರಾಯಕುಂಪಿ ಗ್ರಾಮದಲ್ಲಿ ಜಮೀನು ಲೀಜಿಗೆ ಮಾಡುತ್ತಿರುವುದರಿಂದ ಅಲ್ಲಿ ವಾಸವಿರುತ್ತೇನೆ. ಮುಂಬೈ ಪಕೀರ ಸಾಬನ ಜಮೀನನ್ನು ಲೀಜಿಗೆ ಮಾಡುತ್ತಿದ್ದೇನೆ. ಅದರ ಸ.ನಂ. ನನಗೆ ಗೊತ್ತಿಲ್ಲ.

ಸ.ನಂ.163 ರ ಒಂದು ಭಾಗದಲ್ಲಿ ಎತ್ತುಗಳನ್ನು ಮೇಹಿಸುತ್ತಿದ್ದಾಗ ನನ್ನನ್ನು ಪಂಚನಾಮೆಗೆ ಕರೆದಿರುತ್ತಾರೆ. ಪಂಚನಾಮೆ ಬರೆಯಲ್ಪಟ್ಟಿತ್ತು. ಪೊಲೀಸರು ಜಮೀನಿನಲ್ಲಿ ಪಂಚನಾಮೆಯನ್ನು ಬರೆದಿರುತ್ತಾರೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳು ಗೊತ್ತಿರುವುದಿಲ್ಲ. ಪಂಚನಾಮೆಯನ್ನು ನಾನು ಓದಿ ನೋಡಿರುವುದಿಲ್ಲ ಪೊಲೀಸರು ಪಂಚನಾಮೆಯಲ್ಲಿ ಬರೆದ ಸಂಗತಿಗಳು ಓದಿ ಹೇಳಿರುವುದಿಲ್ಲ.

ಕೇವಲ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ಹಿರೇರಾಯಕುಂಪಿ ಗ್ರಾಮದಲ್ಲಿ ಮುಂಬೈ ಪಕೀರಸಾಬನ ಜಮೀನನ್ನು ಲೀಜಿಗೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕೋಡಾಲ್ ಮತ್ತು ಬೆಂಡೆಗಂಬ್ಲಿ ಅಕ್ಕ-ಪಕ್ಕದ ಊರುಗಳು ಅಂದರೆ ಸರಿ. ಚಾಸಾ-1 ಮತ್ತು ನಮ್ಮ ನಡುವೆ ಒಳ್ಳೆಯ ಸಂಬಂಧ ಇದೇ ಅಂದರೆ ಸರಿಯಲ್ಲ. ಸ.ನಂ.163 ರ ಜಮೀನಿನಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಮುದ್ದೇ ಮಾಲಿನಂತಾಹ ಕಟ್ಟಿಗೆಗಳು ಎಲ್ಲಾ ಕಡೆ ದೋರೆಯುತ್ತವೆ ಅಂದರೆ ಸರಿ. ಕಟ್ಟಿಗೆಗಳನ್ನು ನನ್ನ ಸಮಕ್ಷಮ ಜಪ್ತಿ ಮಾಡಿಕೊಂಡರು ಅಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.